ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ನಾನು ಹೇಳುತ್ತಿರುವುದು ರಿಜಿಸ್ಟರು ಆಗಿರುವ ಸಂಸ್ಥೆಗಳು ನಿಯಮದಂತೆ ಕೆಲಸ ಮಾಡದೇ ಇರುವುದರ ಬಗ್ಗೆ, ಇತರ ವಿದ್ಯಾ ಸಂಸ್ಥೆಗಳ ವಿಚಾರಗಳನ್ನು ವಿದ್ಯಾ ಇಲಾಖೆಯವರೇ ನೋಡುತ್ತಾರೆ, ರಿಜಿಸ್ಟರು ಮ್ಹಾಡಿದ್ದರೂ ಕೂಡ ಅದರಂತೆ ಜನರಲ್ ಬಾಡಿ ಮೀಟಿಂಗನ್ನು ಮಾಡದೇ ಇರುವುದರಿಂದ ಇವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಇಲ್ಲಿನ ಅಧಿಕಾರಿಗಳ ಮೂಲಕ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ವಿದ್ಯಾ ಸಂಸ್ಥೆಗಳು ಎಂದು ರಿಜಿಸ್ಟರು ಮಾಡಿ ನಿಯಮದಂತೆ ಸಾರ್ವತ್ರಿಕ ಮಹಾ ಸಭೆಯನ್ನು ಕರೆಯದೇ ಹೋದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ಇತರ ವಿಚಾರಗಳಲ್ಲಿ ವಿದ್ಯಾ ಇಲಾಖೆಯವರು ನೋಡಬೇಕೆಂದು ಇಲ್ಲ. ಆದರೆ ಇಲ್ಲಿ ನಡೆದಿರುವುದು ಅಕ್ರಮ ಎಂದು ತಿಳಿದಿದ್ದರೂ ಇಲ್ಲಿನ ಅಧಿಕಾರಿಗಳು ತಕ್ಕ ಕ್ರಮ ತೆಗೆದು ಕೊಳ್ಳದೇ ಇರುವುದರಿಂದ ಇಂತಹ ಅಧಿಕಾರಿಗಳ ಮೇಲೆ ಸರಕಾರ ಏನು ಕಾರ್ಯಕ್ರಮ ಇದುವರೆಗೆ ತೆಗೆದುಕೊಂಡಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನಾಗಲೇ ವಿನಂತಿ ಮಾಡಿಕೊಂಡೆ ಕಾನೂನು ಪ್ರಕಾರ ರಿಜಿಸ್ಟರು ಮಾಡಿರುವಂತಹ ಸಂಸ್ಥೆಗಳು ನಿಯಮಕ್ಕೆ ವಿರೋಧವಾಗಿ ಕೆಲಸ ಮಾಡುತ್ತಿದ್ದರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವುದು ನಮ್ಮ ರಿಜಿಸ್ಟ್ರೇಷನ್ ಇರಾಖೆ. ಇದರ ಮುಖೇನ ಸೂಕ್ತ ಕ್ರಮ ತೆಗೆದುಕೊಳ್ಳುವ ಏಪಾರ್ಡ್ ಮಾಡುತ್ತೇನೆ.

ಶ್ರೀ ಬಿ. ಜಿ ಬಣಕಾರ್.—ಸ್ಯೊಸೆಟಿ ಆಕ್ಟ್ ಪ್ರಕಾರ ವಾರ್ಷಿಕ ವರದಿಯನ್ನು ಕಳುಹಿಸದೇ ಇರುವಂತಹ ಸಂಸ್ಥೆಗಳಿಗೆ ಅವು ನಡೆಸುವ ವಿದ್ಯಾ ಸಂಸ್ಥೆಗಳಿಗೆ ಗ್ರಾಂಟನ್ನು ತಡೆ ಹಿಡಿಯುವ ಕ್ರಮ ತೆಗೆದುಕೊಳ್ಳುತ್ತೀರಾ ? ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಂಟನ್ನು ತಡೆಹಿಡಿಯುವುದು ಮತ್ತು ಇದಕ್ಕೆ ರೆಕಾಗ್ನಿಷನ್ ತೆಗೆದುಹಾಕುವುದು ಇಂತಹ ವಿಚಾರಗಳೆಲ್ಲ ವಿದ್ಯಾ ಇಲಾಖೆಗೆ ಸಂಬಂಧಪಟ್ಟದ್ದು ರೆವೆನ್ಯೂ ಇರಾಖೆಗೆ ಸಂಬಂಧಪಟ್ಟಿರುವುದು ರಿಜಿಸ್ಟರು ಮಾಡಿರುವ ಸಂಸ್ಥೆಗಳು ರೂಲ್ಸಿಗೆ ವಿರೋಧವಾಗಿ ಕೆಲಸ ನಾಡುತ್ತಿದ್ದರೆ ಅಂತಹವರ ರಿಜಿಸ್ಟ್ರೇಷನ್ ಕಿತ್ತು ಹಾಕುವುದರ ಬಗ್ಗೆ ಮಾತ್ರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ ಎಂ ಸಜ್ಜನ್.—ಇಲ್ಲಿ ಹೇಳಿರುವಂತಹ ಸಂಸ್ಥೆಗಳಿಗೆ ಕೊಡುತ್ತಿರುವ ಗ್ರಾಂಟನ್ನು ಬಂದು ಮಾಡುವ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೂಡಲೇ ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ವ್ಯವಸ್ಥೆ ಮಾಡುತ್ತೇನೆ.

Promotions to Officials of Revenue Department in Chickmagalur District

266. SRI G. PUTTASWAMY (Mudigere).—

Will the Minister for Revenue be pleased to state:—

(*a*) the number of officers and officials of Revenue Department in Chickmagalur District who have not been promoted even after ten years of service (Categorywise and Talukwise) ;

(*b*) of them the number of officers and officials belonging to Scheduled Castes and Scheduled Tribes ?

Sri N. HUTCHAMASTHY GOWDA (Minister for Revenue).—

(*a*).—

Taluk	*I Division*	*II Division*	*Typists*
a) Chickmagalur	4	8	...
Tarikere	...	5	...
Mudiger	1	6	1
Kadur	3	2	...
Koppa	1	3	...
N. R. Pura	3	2	...
Sringeri	1	1	...
Working on deputation in other departments	3		
b) Outside the District	...	3	
Chickmagalur	...		...
Tarikere	...	1	...
Mudigere	...	3	...
Kadur	1	1	...
Koppa	...	...	...
N. R. Pura	...	...	...
Sringeri	...	...	...

ಶ್ರೀ ಜಿ. ಪುಟ್ಟಸ್ವಾಮಿ.—30 ಜನ ಸೆಕೆಂಡ್ ಡಿವಿಜಿಡ್ ಕ್ಲಾರ್ಕ್‌ಗಳಿದ್ದರೂ ಇವರಿಗೇಕೆ ಇದುವರೆಗೆ ಪ್ರಮೋಷನ್ ಕೊಡಲಿಲ್ಲ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.–ಇಲ್ಲಿ 13 ಜನ ಫಸ್ಟ್ ಡಿವಿಜನ್ ಕ್ಲಾರ್ಕ್‌ಗಳು ಏನಿದ್ದಾರೆ ಅವರಿಗೆ ಪ್ರಮೋಷನ್ ಕೊಡಲು ಇನ್ನೂ ವೇಕೆನ್ಸಿ ಹೊರೆಯಲ್ಲಿ ಆದ್ದರಿಂದ ಕೊಟ್ಟಿಲ್ಲ. ಮತ್ತು 18 ಜನ ಸೆಕೆಂಡ್ ಡಿವಿಜನ್ ಕ್ಲಾರ್ಕ್‌ಗಳು ಡಿಪಾರ್ಟ್‌ಮೆಂಟ್ ಜೆಸ್ಟ್‌ನ್ನು ಪಾಸು ಮಾಡಿಲ್ಲ. ಇದರಿಂದಾಗಿ ಇವರಿಗೆ ಪ್ರಮೋಷನ್ ಕೊಟ್ಟಿಲ್ಲ, ಇನ್ನು 12ಜನ ಸೆಕೆಂಡ್ ಡಿವಿಜನ್ ಕ್ಲಾರ್ಕ್‌ಗಳಿಗೆ ಪ್ರಮೋಷನ್ ಕೊಡಲು ವೇಕೆನ್ಸಿ ಸಿಗದೇ ಇರುವುದರಿಂದಾಗಿ ಕೊಟ್ಟಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಷೆಡ್ಯೂಸ್ ಕ್ಯಾಸ್ಟ್ ಜನರು ಇಲ್ಲಿ ಆರು ಜನರಿದ್ದಾರೆ. ಇವರುಗಳಿಗೆ ಒಬ್ಬರಿಗೂ ಫಸ್ಟ್ ಡಿವಿಜನ್‌ಗೆ ಪ್ರಮೋಷನ್ ಕೊಟ್ಟಿಲ್ಲ. ಶೇಕಡ 168ರಷ್ಟು ರಿಸರ್ವೇಷನ್ ಕೊಡಬೇಕೆಂದು ಇದ್ದರೂ ಇವರಿಗೇಕೆ ಇನ್ನೂ ಪ್ರಾತಿನಿಧ್ಯ ಕೊಡಲಿಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಮೋಷನ್ ಕೊಡುವಾಗ ಇದರಲ್ಲಿ ಷೆಡ್ಯೂಲು ಕ್ಯಾಸ್ಟ್ ಹಾಗೂ ಇನ್ನಿತರ ವರ್ಗಗಳು ಎಂದು ರಿಸರ್ವ್ ಮಾಡಲಾಗುವುದಿಲ್ಲ. ಎಲ್ಲರಿಗೂ ಯಾವ ರೀತಿಯಾದ ನಿಯಮಗಳಿವೆಯೋ ಅದನ್ನು ಅನುಸರಿಸಿ ಇವರಿಗೂ ಕೊಡಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ಪ್ರಮೋಷನ್ ಕೊಟ್ಟಿರುವುದು ಸಹಕಾರದ ಗಮನಕ್ಕೆ ಬಂದರೆ ಅದನ್ನು ಪರಿಶೀಲಿಸಿ ನ್ಯಾಯ ದೊರಕಿಸಿ ಕೊಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂತಹ ಯಾವುದಾದರೂ ನಿರ್ದಿಷ್ಟವಾದ ವಿಚಾರಗಳು ಇದ್ದು ಅವನ್ನು ಸರಕಾರದ ಗಮನಕ್ಕೆ ತಂದರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವಂತಾಗುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಕೇಂದ್ರ ಸರಕಾರದಲ್ಲಿ ಸೀನಿಯಾರಿಟಿ ಕಂ ಮೆರಿಯಟ್ ಎನ್ನುವ ತತ್ವವನ್ನು ಒಪ್ಪಿರುವಂತೆ ಇಲ್ಲೂ ಕೂಡ ಮಾಡಲು ಇದರ ಸಬ್ ಕಮಿಟಿ ಪರಿಶೀಲಿಸುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವುದಾದರೂ ಹೊಸ ಕಾರ್ಯಕ್ರಮ ಕೈಗೊಳ್ಳುವ ಬೇಕಾದರೂ ಸರಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಅವರಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

Assistance to Flood Victims in Villages of Sira Taluk

329 Sri T. TAREGOWDA (Kallambella).—

Will the Minister for Revenue be pleased to state.—

(*a*) whether the Government has released the promised amount towards the flood damage losses to the ryots of Amalagondi, Lutta Hanumanapalya, Yelladabagi and other villages in Sira Taluk ;

(*b*) if so, the amount released and the amount to be treated as subsidy and loan per acre of damages incurred ?

Sri N. HUTCHAMASTHY GOWDA (Minister for Revenue).—

(*a*) Yes.

(*b*) Gratuitous relief of Rs. 19.60 lakhs and L.I.Loan of Rs. 8.25 lakhs for Madhugiri, Sira and Koratagere taluks has been released. Rs. 6.50 lakhs as gratuitous relief and Rs. 3.25 lakhs as L. I. Loan has been released to Sira Taluk for providing relief to the sufferers on account of heavy rain.

ಶ್ರೀ ಟಿ. ತಾರೇಗೌಡ.—ಪ್ರವಾಹದಿಂದ ತೊಂದರೆಗೀಡಾದ ಜನಕ್ಕೆ ಕುಡಿಯುವ ನೀರಿನ ಬಾವಿಗಾಗಿ ಸಾವಿರ ರೂಪಾಯಿ, ಜಮೀನು ದುರಸ್ತಿಗಾಗಿ 500 ರೂಪಾಯಿ ಹಾಗೂ ಪಂಪು ಸೆಟ್ಟು ಉಪಯೋಗಿಸಿದರೆ ಇದಕ್ಕೆ 1250 ರೂಪಾಯಿಯಂತ ಧನ ಸಹಾಯ ಕೊಡಬೇಕೆಂದು ಶಿಫಾರಸು ಮಾಡಿರಲಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರಕಾರದ ನಿಯಮ ಇರುವುದು ಉಚಿತವಾಗಿ ಸಹಾಯ ಕೊಡತಕ್ಕ ಹಣ 500 ರೂಪಾಯಿಗಳಿಗೆ ಮೀರಿರದಾರದು ಎಂದು.

ಶ್ರೀ ಟಿ. ತಾರೇಗೌಡ—ತಹಶೀಲ್‌ದಾರರಿಗೆ ಕೇವಲ 200 ರೂಪಾಯಿಗಳನ್ನು ಮಂಜೂರು ಮಾಡುವುದಕ್ಕೆ ಅಧಿಕಾರವಿದೆ, 500 ರೂಪಾಯಿಗಳನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಯವರಿಗೆ ಮಾತ್ರ ಅಧಿಕಾರವಿದೆ ಎಂದು ಹೇಳಲಾಗುತ್ತಿದೆ. ಇದರಿಂದ ಜಾಗ್ರತೆ ರೈತರಿಗೆ ಹಣ ದೊರೆಯದೆ ರ್ಯಾಪ್ಸ್ ಆಗುವ ಸಂಭವವಿದೆ. ಆದಕಾರಣ ತಹಶೀಲ್‌ದಾರರಿಗೆ 500 ರೂಪಾಯಿಗಳವರೆಗೆ ಮಂಜೂರು ಮಾಡುವ ಅಧಿಕಾರವನ್ನು ಕೊಡುತ್ತೀರಾ ?